6. ಕ್ಯಾಪಿಟಲ್ ಪವರ್ ಸಿಸಟರ್ಸ್ ಪ್ರೈ.ಲಿ. ಯು.ಪಿ.
7. ಇ.ಸಿ.ಇ.ಇಂಡಸ್ಟ್ರೀಸ್ ಲಿ, ಹೈದರಾಬಾದ್
8. ಎಲಿಮರ್ ಎಲೆಕ್ಟ್ರಾನಿಕ್ಸ್, ಡೆಲ್ಲಿ.
9. ಜೆಇಸಿ ಅಲಸ್ಟೋಮ (ಇಂಡಿಯಾ) ಲಿ. ಕಲಕತ್ತಾ.
10. ಇಂಡಿಯಾ ಮೀಟರ್ಸ್ ಲಿ., ಮದ್ರಾಸ್
11. ಜೈಪುರ ಮೆಟಲ್ಸ್ ಅಂಡ್ ಎಲೆಕ್ಟ್ರಿಕಲ್ಸ್ ಲಿ., ಜೈಪುರ.
12. ಜನಿಕಾ ಎಲೆಕ್ಟ್ರಾನಿಕ್ಸ್ ಪ್ರೈ.ಲಿ. ಹೈದರಬಾದ್
13. ಮಾರ್ಡನ್ ಇನ್ಸ್ಟ್ರುಮೆಂಟ್ಸ್ ಪ್ರೈ.ಲಿ. ಡೆಲ್ಲಿ
14. ಸೀ ಹಾರ್ಸ್ ಇಂಡಸ್ಟ್ರೀಲಿ., ತಿರುಚಿ.
15. ಎಸ್‌ಪಿಸಿ ಸೂಪರ್ ಮೆಟಲ್ಸ್ ಪ್ರೈ ಲಿ. ಬೆಂಗಳೂರು.
16. ಇಂಟೋಟೆಕ್ಸ್ ಸ್ವೀಚ್‌ಗೇರ್ ಅಂಡ್ ಕಂಟ್ರೊಲ್ಸ್ ಯು.ಪಿ.
17. ಟವರ್ಸ್ ಅಂಡ್ ಟ್ರಾನ್ಸ್‌ಫಾರ್ಮರ್ಸ್ ಲಿ. ಡೆಲ್ಲಿ.
18. ಉಪಕಾರ ಮೀಟರ್ ಪ್ರೈ. ಲಿ. ಬೆಂಗಳೂರು.
19. ವಾಮ್ ಎಲೆಕ್ಟ್ರೋ ಡಿವೈಸಿಸ್ ಪ್ರೈ.ಲಿ.
20. ವಿಹೆಚ್‌ಇಲ್ ಇಂಡಸ್ಟ್ರೀಸ್ ಲಿ., ಡೆಲ್ಲಿ.
21. ವಿಎಕ್ಸ್‌ಎಲ್ ಲ್ಯಾಂಡೀಸ್ ಅಂಡ್ ಗೈರ್ ಲಿ., ವೆಸ್ಟ್ ಬೆಂಗಾಲ್.

ವಿದ್ಯುಚ್ಛಕ್ತಿ ಯೋಜನೆಗಳ ಪ್ರಗತಿ

716 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ/

ಅ) ರಾಜ್ಯದಲ್ಲಿ ಪ್ರಗತಿಯಲ್ಲಿರುವ ಪ್ರಮುಖ ವಿದ್ಯುಚ್ಛಕ್ತಿ ಯೋಜನೆಗಳು ಯಾವಾಗ ಪೂರ್ಣಗೊಳ್ಳುವುವು ?

ಆ) ಈ ಯೋಜನೆಗಳಲ್ಲಿ ಉತ್ಪತ್ತಿಯಾಗಲಿರುವ ವಿದ್ಯುಚ್ಛಕ್ತಿ ಪ್ರಮಾಣವೆಷ್ಟು ?

ಇ) ವಿದ್ಯುಚ್ಛಕ್ತಿ ತಯಾರು ಮಾಡಲು ಯಾವುದಾದರೂ ಖಾಸಗಿ ವಿದೇಶಿ ಕಂಪನಿಗಳಿಗೆ ಸರ್ಕಾರ ಅನುಮತಿ ನೀಡಿದೆಯೇ ?

ಈ) ಅನುಮತಿ ನೀಡಿದ್ದರೆ ಸರ್ಕಾರದ ಷರತ್ತುಗಳೇನು ?

ಶ್ರೀ ಶರಣಬಸಪ್ಪ ದರ್ಶನಾಪುರ್ (ಇಂಧನ ರಾಜ್ಯ ಸಚಿವರು) :

ಅ) ವಿವರಗಳು ಕೆಳಕಂಡಂತಿವೆ :-

	ಯೋಜನೆಗಳು	ಪೂರ್ಣಗೊಳ್ಳುವ ಅವಧಿ
1.	ಕದ್ರಾಯೋಜನೆ	1998-99
2.	ಕೊಡಸಳ್ಳಿ ಯೋಜನೆ	1998-99
3.	ಗೇರುಸೊಪ್ಪ ಯೋಜನೆ	2001-01
4.	ರಾಯಚೂರು ಶಾಖೋತ್ಪನ್ನ ಕೇಂದ್ರದ 5 ಮತ್ತು 6ನೇ ಘಟಕ	1999-2000
5.	ಬೃಂದಾವನ ಯೋಜನೆ	1999-2000
6.	ಭದ್ರಾಯೋಜನೆ	1998-1999

ಇದಲ್ಲದೆ ಸುಮಾರು 10100 ಮೆಗಾ ವ್ಯಾಟ್ ಸಾಮರ್ಥ್ಯದ ಖಾಸಗೀ ಯೋಜನೆಗಳಿಗೆ ಮಂಜೂರಾತಿ ನೀಡಿದೆ. ಈ ಯಾವುದೇ ಯೋಜನೆಗಳು ಸ್ಥಾಪನೆಯ ಹಂತವನ್ನು ಮುಚ್ಚಿರುವುದಿಲ್ಲ.

ಆ) ವಿವರಗಳು ಕೆಳಕಂಡಂತಿವೆ :-

	ಯೋಜನೆ	ದೊರೆಯುವ ವಿದ್ಯುತ್	
		(ಮೆ.ವ್ಯಾ)	(ಮಿ. ಯೂ.ಗಳಲ್ಲಿ)
1.	ಕದ್ರಾ (3x50)	150	570
2.	ಕೊಡಸಳ್ಳಿ (3x50)	120	512
3.	ಗೇರುಸೊಪ್ಪ (4x60)	240	600
4.	ರಾಯಚೂರು ಶಾಖೋತ್ಪನ್ನ ಕೇಂದ್ರ 5 ಮತ್ತು 6ನೇ ಘಟಕ (3x210)	420	2520
5.	ಬೃಂದಾವನ (2x6)	12	65
6.	ಭದ್ರಾ (1x6)	6	25
	ಒಟ್ಟು	**948**	**4292**

ಇ) ಹೌದು.

ಈ) ಸರ್ಕಾರವು ವಿಧಿಸಿರುವ ಮುಖ್ಯ ಷರತ್ತುಗಳು :

1. ಸದರಿ ಕಂಪನಿಗಳು ಸಂಬಂಧಿಸಿದ ಕಾಯಿದೆಗಳನ್ವಯ ಬೇಕಾಗುವ ಎಲ್ಲಾ ಅನುಮೋದನೆ ಮತ್ತು ಅನುಮತಿಗಳನ್ನು ಸಂಬಂಧಪಟ್ಟ ಇಲಾಖೆ ಪ್ರಾಧಿಕಾರಗಳಿಂದ ಪಡೆಯತಕ್ಕದ್ದು ಸರ್ಕಾರಿ ಆದೇಶದ ದಿನಾಂಕದಿಂದ ಒಂದು ವರ್ಷದೊಳಗೆ ಕೇಂದ್ರ ವಿದ್ಯುತ್ ಪ್ರಾಧಿಕಾರದಿಂದ ತತ್ವಶಃ ಒಪ್ಪಿಗೆಯನ್ನು ಪಡೆಯತಕ್ಕದ್ದು.

2. ಸದರೀ ಕಂಪನಿಗಳು ಸರ್ಕಾರೀ ಆದೇಶದ ದಿನಾಂಕದಿಂದ ಎರಡು ವರ್ಷದೊಳಗೆ ಆರ್ಥಿಕ ಸಮಾಪ್ತಿ (ಫೈನಾನ್ಸಿಯಲ್ ಕ್ಲೋಷರ್) ಯನ್ನು ಸಾಧಿಸತಕ್ಕದ್ದು.

3. ಉತ್ಪಾದಿಸಲಾದ ವಿದ್ಯುತ್ತನ್ನು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೆ ಮಾರಲು ಸದರೀ ಕಂಪನಿಗಳು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯೊಡನೆ ವಿದ್ಯುತ ಖರೀದಿ ಒಪ್ಪಂದವನ್ನು ಮಾಡಿಕೊಳ್ಳತಕ್ಕದ್ದು.

4. ವಿದೇಶಿ ಬಂಡವಾಳ ಹೂಡಿಕೆ ಇದ್ದಲ್ಲಿ ಕಂಪನಿಗಳು ಭಾರತ ಸರ್ಕಾರದ ಎಫ್. ಎ.ಪಿ.ಬಿ. ಯಿಂದ ಅನುಮೋದನೆಯನ್ನು ಪಡೆಯತಕ್ಕದ್ದು.

ಚಾಮರಾಜನಗರ ತಾಲ್ಲೂಕಿನಲ್ಲಿರುರ ಕೆರೆಗಳ ದುರಸ್ತಿ

717 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಸಣ್ಣ ಅತಿ ಸಣ್ಣ ದೊಡ್ಡ ಅತೀ ದೊಡ್ಡ ಕೆರೆಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ವಿವರ ನೀಡುವುದು)

ಆ) ಕೆರೆಗಳನ್ನು ದುರಸ್ತಿ ಮಾಡಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಇ) ಚಾಮರಾಜನಗರ ತಾಲ್ಲೂಕಿನಲ್ಲಿ ಇರುವ ಕೆರೆಗಳ ಸಂಖ್ಯೆ ಎಷ್ಟು?

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು) :

ಅ) ರಾಜ್ಯದಲ್ಲಿ 36,675 ಕೆರೆಗಳಿವೆ. ಇವುಗಳನ್ನು ಕೆಳಗಿನಂತೆ ವಿಂಗಡಿಸಲಾಗಿದೆ.

1.	0-4 ಹೆಕ್ಟೇರುಗಳ ಅಚ್ಚುಕಟ್ಟು ಇರುವ ಕೆರೆಗಳು.	:	13743
2.	5-2000 ಹೆಕ್ಟೇರುಗಳ ಅಚ್ಚುಕಟ್ಟು ಇರುವ ಕೆರೆಗಳು	:	22918
3.	2000 ಹೆಕ್ಟೇರುಗಳಿಗಿಂತ ಜಾಸ್ತಿ ಅಚ್ಚುಕಟ್ಟು ಇರುವ ಕೆರೆಗಳು	:	14
			36675

ಜಿಲ್ಲಾವಾರು ವಿವರಗಳನ್ನು ಅನುಬಂಧ-1ರಲ್ಲಿ ನೀಡಿದೆ.